# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **745** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)** |
| **ಉತ್ತರಿಸುವ ಸಚಿವರು** | **ಉನ್ನತ ಶಿಕ್ಷಣ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | **16.12.2024** |

| | **ಪ್ರಶ್ನೆ** | **ಉತ್ತರ** |
|---|---|---|
| (ಅ) | ದಿನಾಂಕ:01.04.2006ರ ಹಿಂದೆ ಸರ್ಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ನಂತರದ ದಿನಗಳಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡು ವಿವಿಧ ಹುದ್ದೆಗಳಿಗೆ ಸೇರ್ಪಡೆಯಾಗಿ ವಿಶ್ವವಿದ್ಯಾಲಯಗಳಲ್ಲಿ ಯು.ಜಿ.ಸಿ ವೇತನ ಪಡೆದು ಕಾರ್ಯನಿರ್ವಹಿಸುತ್ತಿರುವ ಬೋಧಕ-ಬೋಧಕೇತರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ನೀಡದಿರಲು ಕಾರಣಗಳೇನು; (ವಿವರ ನೀಡುವುದು) | ರಾಜ್ಯ ಸರ್ಕಾರದ ಸೇವೆಗೆ ದಿನಾಂಕ: 01.04.2006ರಂದು ಅಥವಾ ತರುವಾಯ ಸೇರುವ ಎಲ್ಲಾ ನೇಮಕಾತಿದಾರರಿಗೆ ಕಡ್ಡಾಯಗೊಳ್ಳುವಂತೆ ಈ ಮುನ್ನ ಜಾರಿಯಲ್ಲಿದ್ದ ಪ್ರಯೋಜನಾತ್ಮಕ ನಿವೃತ್ತಿ ಸೌಲಭ್ಯಕ್ಕೆ ಬದಲಾಗಿ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: FD (Spl) 04 PET 2005, ದಿನಾಂಕ: 31.03.2006ರನ್ವಯ ಜಾರಿಗೊಳಿಸಿರುವುದಾಗಿದೆ.<br><br>ದಿನಾಂಕ: 01.04.2006ರ ನಂತದಲ್ಲಿ ಸರ್ಕಾರಿ ಸೇವೆಗೆ ಹೊಸದಾಗಿ ಸೇರುವ ನೌಕರರ ಪ್ರಕರಣಗಳಲ್ಲಿ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಯು ಅನ್ವಯವಾಗತಕ್ಕದ್ದಲ್ಲ. ಈ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ನಿಯಮಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: FD 02 FRA 2010, ದಿನಾಂಕ:19.11.2010ರ ಮೇರೆಗೆ ತಿದ್ದುಪಡಿಯನ್ನು ತಂದಿದ್ದು, ಅದರನ್ವಯ ಸೇರ್ಪಡೆಗೊಳಿಸಲಾಗಿರುವ ಹೊಸ ನಿಯಮ 2-ಸಿ ರಂತೆ 2ನೇ ನಿಯಮದ (1) ನೇ ಉಪ ನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ನಿಯಮಗಳ ಭಾಗ –IV (1) ನೇ ಏಪ್ರಿಲ್ 2006 ರಂದು ಅಥವಾ ತರುವಾಯ ರಾಜ್ಯ ಸರ್ಕಾರಿ ಸೇವೆಗೆ ಸೇರುವ ಹೊಸ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ.<br><br>ಈ ಸನ್ನಿವೇಶದಿಂದಾಗಿ ಈ ಮುನ್ನ ಕೇಂದ್ರ ಸರ್ಕಾರ, ಬೇರೆ ರಾಜ್ಯ ಸರ್ಕಾರ, ಅನುದಾನಿತ ಸಂಸ್ಥೆಗಳು, ರಾಜ್ಯ ಸರ್ಕಾರದಡಿಯಲ್ಲಿನ ಸ್ಥಳೀಯ ಸಂಸ್ಥೆಗಳು, ಜಿಲ್ಲಾ ಮಂಡಳಿಗಳು, ರಾಜ್ಯ ಸ್ವಾಯತ್ತ ಸಂಸ್ಥೆಗಳಲ್ಲಿ (ಇದರಲ್ಲಿ ಒಂದು ರಾಜ್ಯ ಶಾಸನ ಪ್ರದತ್ತ ನಿಕಾಯ ಅಥವಾ ಒಂದು ರಾಜ್ಯ ವಿಶ್ವವಿದ್ಯಾಲಯವು ಒಳಗೊಳ್ಳುವುದು) ದಿನಾಂಕ: 01.04.2006ರ ಪೂರ್ವದಲ್ಲಿ ನೇಮಕ ಹೊಂದಿದ್ದು, ದಿನಾಂಕ: 01.04.2006ರ ನಂತರದಲ್ಲಿ ಸರ್ಕಾರಿ ಸೇವೆಗೆ ನೇಮಕಾತಿ ಹೊಂದುವ ಪ್ರಕರಣಗಳೂ ಸಹ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಕಡ್ಡಾಯವಾಗಿ ಒಳಪಡುವುದರಿಂದ ಇಂತಹ ಹಿಂದಿನ ಸೇವೆಗಳನ್ನು ನಿವೃತ್ತಿ ವೇತನ ಸೌಲಭ್ಯಗಳ ಉದ್ದೇಶಕ್ಕಾಗಿ ಪರಿಗಣಿಸಲು ಅವಕಾಶವಿಲ್ಲ. ಯೋಜನೆಯಲ್ಲಿ ತೊಡಗಿಸುವ ವಂತಿಗೆಯ ಅನುಸಾರ ಸೌಲಭ್ಯ ನಿರ್ಧರಿತವಾಗುತ್ತದೆಯೇ ಹೊರತು ಅರ್ಹತಾದಾಯಕ ಸೇವೆಯ ಆಧಾರದ ಮೇಲಲ್ಲ. **ಇದೇ ನಿಯಮ/ತತ್ವಗಳನ್ನು ವಿಶ್ವವಿದ್ಯಾಲಯಗಳು ಸಹ ಕಡ್ಡಾಯವಾಗಿ ಪಾಲಿಸಬೇಕಾಗುವುದು.** |
| (ಆ) | ಆರ್ಥಿಕ ಇಲಾಖೆಯು | ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 24.01.2024ರ ಆದೇಶದನ್ವಯ |

| | | |
|---|---|---|
| | ದಿನಾಂಕ:24.01.2024ರಂದು ಹೊರಡಿಸಿರುವ ಆದೇಶದಲ್ಲಿ ದಿನಾಂಕ:01.04.2006ರ ಪೂರ್ವದಲ್ಲಿ ಅರ್ಜಿ ಸಲ್ಲಿಸಿ, ನಂತರ ಹಲವಾರು ಇಲಾಖೆಗಳಲ್ಲಿ ವಿವಿಧ ಹುದ್ದೆಗಳಿಗೆ ಸೇರ್ಪಡೆಯಾಗಿರುವವರಿಗೆ ಹಳೆಯ ಪಿಂಚಣಿ ಯೋಜನೆಯನ್ನು ನೀಡಲಾಗಿದೆಯೇ; | ದಿನಾಂಕ:01.04.2006ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗಾಗಿ ಹೊರಡಿಸಿದ ನೇಮಕಾತಿ ಅಧಿಸೂಚನೆಗಳ ಮೇರೆಗೆ ಆಯ್ಕೆ ಹೊಂದಿ ದಿನಾಂಕ: 01.04.2006 ರಂದು ಅಥವಾ ಆ ದಿನಾಂಕದ ನಂತರ ಸೇವೆಗೆ ಸೇರಿರುವ ಕಾರಣದಿಂದ ನೂತನ ಅಂಶದಾಯಿ ಕೊಡುಗೆ ಯೋಜನೆಯ (ರಾಷ್ಟ್ರೀಯ ಪಿಂಚಣಿ ಯೋಜನೆ) ವ್ಯಾಪ್ತಿಗೊಳಪಟ್ಟಿರುವ ಸರ್ಕಾರಿ ನೌಕರರನ್ನು ಸರ್ಕಾರವು ಅವರ ಅಭಿಮತದ ಮೇರೆಗೆ ಕೆಲವು ಷರತ್ತುಗಳಿಗೊಳಪಟ್ಟು ಒಂದು ಬಾರಿಯ ಕ್ರಮವಾಗಿ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡಿಸಲು ಒಪ್ಪಿಗೆ ನೀಡಿದೆ. |
| (ಇ) | ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರಿಗೆ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಿ, ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಅನ್ವಯಿಸುವುದಿಲ್ಲವೆಂದು ಆರ್ಥಿಕ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆಯೇ; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 24.01.2024ರ ಆದೇಶವು ರಾಜ್ಯ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ ಅನ್ವಯವಾಗುವುದರಿಂದ, ನಿಗಮ/ ಮಂಡಳಿ/ವಿಶ್ವವಿದ್ಯಾಲಯಗಳು/ ಇತರೇ ಸ್ವಾಯತ್ತ ಸಂಸ್ಥೆಗಳಿಂದ ಬರುವ ಪ್ರಸ್ತಾವನೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. |
| (ಈ) | ರಾಜ್ಯದ ವಿವಿಧ ಸರ್ಕಾರಿ ವಿಶ್ವವಿದ್ಯಾಲಯಗಳಿಂದ ಅರ್ಹ ಬೋಧಕ-ಬೋಧಕೇತರರಿಗೆ ಆರ್ಥಿಕ ಇಲಾಖೆಯ ಅಧಿಸೂಚನೆಯನ್ವಯ ಪದವಿ ಕಾಲೇಜಿನ ಅಧ್ಯಾಪಕರಿಗೆ ಹಳೆ ಪಿಂಚಣಿ ಸೌಲಭ್ಯ ನೀಡಿ ವಿಶ್ವವಿದ್ಯಾಲಯದ ನೌಕರರಿಗೆ ನೀಡದಿರಲು ಕಾರಣಗಳೇನು? | ಉತ್ತರ (ಅ) ರಲ್ಲಿರುವ ಅಂಶವನ್ನು ಪುನರುಚ್ಚರಿಸಿದೆ. |

ಸಂಖ್ಯೆ: ಇಡಿ 249 ಯುಎನ್ಇ 2024

(ಡಾ: ಎಂ. ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು